**ದಿನಾಂಕಃ 22.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ಆರೋಪಿ **ಪರ ಶ್ರೀ** ಎಂ.ಎನ್.ಎಸ್ **ವಕೀಲರಿಂದಃ**

ಸಾಕ್ಷಿದಾರರಿಗೆ ದಿನಾಂಕ 27.04.2022 ರ ಕ್ರಯದ ಕರಾರು ಪತ್ರದ ಧೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ಕರಾರು ಪತ್ರವನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ನಿಡಿ-3 ರ ಕ್ರಯದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿದಾರರಿಗೆ ದಿನಾಂಕ 27.04.2022 ರ ನೊಂದಾಯಿತವಲ್ಲದ ಕ್ರಯದ ಕರಾರು ಪತ್ರದ ಮೂಲ ಪ್ರತಿಯನ್ನು ತೋರಿಸಲಾಗಿ ಸಾಕ್ಷಿದಾರರು ಸದರಿ ನೊಂದಾಯಿತವಲ್ಲದ ಕರಾರು ಪತ್ರದ ಮೂಲ ಪ್ರತಿಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಸದರಿ ನಿಡಿ-4 ರ ನೊಂದಾಯಿತವಲ್ಲದ ಕ್ರಯದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿದ್ದೇನೆ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರ ಆದ ದಿನಾಂಕದಂದು ಆರೋಪಿಯು ಚಂದ್ರುರವರಿಗೆ ರೂ.1,00,000/- ದ ಚೆಕ್ ಅನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ ಅನ್ನು ಚಂದ್ರುರವರು ತಮ್ಮ ಬ್ಯಾಂಕಿಗೆ ಹಾಜರುಪಡಿಸಿ ಆರೋಪಿಯ ಖಾತೆಯಿಂದ ನಗದೀಕರಣ ಮಾಡಿಕೊಂಡಿದ್ದರಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರೂ.1,00,000/- ಹಣವನ್ನು ನಾನು, ಚಂದ್ರು ಮತ್ತು ರಾಮೇಗೌಡರವರು ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ನನಗೆ ನಿಡಿ-3 ಮತ್ತು 4 ರ ಕ್ರಯದ ಕರಾರು ಪತ್ರಗಳ ವ್ಯವಹಾರದ ಬಗ್ಗೆ ಗೊತ್ತಿಲ್ಲ. ನಾನು ಮತ್ತು ನನ್ನ ಸಂಬಂಧಿಯಾದ ಜಯರಾಮುರವರು ಕುದೇರು ಉಪ ನೊಂದಣಾಧಿಕಾರಿಗಳ ಕಛೇರಿಯ ಬಳಿ ಹೋದಾಗ ಹರೀಶರವರು ಹೇಳಿದ್ದರಿಂದ ಸದರಿ ನಿಡಿ-3 ಮತ್ತು 4 ರ ದಾಖಲಾತಿಗಳಿಗೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆ. ಸದರಿ ಕುದೇರು ಉಪ ನೊಂದಣಾಧಿಕಾರಿಗಳ ಕಛೇರಿಗೆ ನಾವು

ದಾಖಲಾತಿಗಳ ನಕಲುಗಳನ್ನು ತೆಗೆದುಕೊಂಡು ಬರಲು ಹೋಗಿದ್ದೆವು. ಸದರಿ ದಿನ ನನ್ನ ಸಂಬಂಧಿ ಜಯರಾಮುರವರು ಸದರಿ ಕಛೇರಿಗೆ ದಾಖಲಾತಿಗಳ ನಕಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ನಾನು ಈ ಮೇಲಿನಂತೆ ಅರ್ಜಿ ಸಲ್ಲಿಸಲು ಕುದೇರು ಉಪ ನೊಂದಣಾಧಿಕಾರಿಗಳ ಕಛೇರಿಗೆ ಹೋಗಿದ್ದೆವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ದಿನ ನಾನು, ಚಂದ್ರು ಮತ್ತು ರಾಮೇಗೌಡರವರು ಪ್ರಸನ್ನಮೂರ್ತಿ ಹಾಗೂ ಹರೀಶ್ ರವರ ನಡುವೆ ನಡೆದಿದ್ದ ಜಮೀನಿನ ಮಾತುಕತೆಗಾಗಿ ಮತ್ತು ಕ್ರಯದ ಕರಾರು ಪತ್ರಗಳ ನೊಂದಣಿಗಾಗಿ ಸದರಿ ಕುದೇರು ಉಪ ನೊಂದಣಾಧಿಕಾರಿಗಳ ಕಛೇರಿಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಹರೀಶ್ ರವರು ನನ್ನ ಸ್ನೇಹಿತರಾಗಿರುವುದರಿಂದ ಅವರು ಹೇಳಿದ್ದರಿಂದ ನಾನು ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆ. ಸದರಿ ಕ್ರಯದ ಕರಾರು ಪತ್ರದ ಪ್ರಕಾರ ಕ್ರಯ ಪತ್ರ ನೊಂದಣಿ ಆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನಿಡಿ-3 ಮತ್ತು 4 ರ ಕರಾರು ಪತ್ರಗಳ ಪ್ರಕಾರ ಹರೀಶ್ ರವರು ಕ್ರಯ ಪತ್ರ ಮಾಡಿಸಿಕೊಳ್ಳದೇ ಅವರ ಸಂಬಂಧಿಕರಾದ ಮುನಿರಾಜುರವರ ಹೆಸರಿಗೆ ಕ್ರಯ ಪತ್ರ ನೊಂದಣಿ ಮಾಡಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರ ನೊಂದಣಿ ಆದ ದಿನಾಂಕದಂದು ನಾನು ಕುದೇರು ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಹಾಜರಿದ್ದೆನು ಎಂದರೆ ಸರಿಯಲ್ಲ. ಸದರಿ ದಿನ ಹರೀಶ್ ರವರು ಸಹ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರಕ್ಕೆ ಹರೀಶ್ ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕ 29.08.2022 ರ ಕ್ರಯ ಪತ್ರ ನೊಂದಣಿ ಆದಾಗ ಈ ಪ್ರಕರಣದ ಆರೋಪಿಯು ನನಗೆ ಈ ಪ್ರಕರಣದ ಚೆಕ್ಕನ್ನು ನೀಡಿದ್ದರು ಎಂದರೆ ಸರಿಯಲ್ಲ. ಅದೇ ದಿನ ಆರೋಪಿಯು ರೂ.25,000/-ದ ಚೆಕ್ಕನ್ನು ರಾಮೇಗೌಡರವರಿಗೂ ಸಹ ನೀಡಿದ್ದಾರೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿಯು ರೂ.50,000/-ದ ಚೆಕ್ಕನ್ನು ಚಂದ್ರುರವರಿಗೂ ಸಹ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನ ಕ್ರಯದಾರರಾದ ಮುನಿರಾಜುರವರು ಆರೋಪಿಗೆ ಉಳಿಕೆ ಕ್ರಯದ ಹಣವಾದ ರೂ.7,50,000/-ಹಣವನ್ನು ಮೂರು ಚೆಕ್‌ಗಳ ಮೂಲಕ ಆರೋಪಿಗೆ

ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಸದರಿ ಮೂರು ಚೆಕ್ ಗಳನ್ನು ನಗದೀಕರಣಕ್ಕಾಗಿ ತಮ್ಮ ಬ್ಯಾಂಕ್ ಗೆ ಹಾಜರುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ಚೆಕ್ ಗಳನ್ನು ಆರೋಪಿಯು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಮುನಿರಾಜುರವರ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಚೆಕ್ ಬೌನ್ಸ್ ಆದವು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ವಿಚಾರಗಳನ್ನು ಆರೋಪಿಯು ನನಗೆ, ಚಂದ್ರುರವರಿಗೆ ಮತ್ತು ರಾಮೇಗೌಡರವರಿಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಚಂದ್ರುರವರು ಸ್ಪಂದಿಸದಿದ್ದಾಗ ಆರೋಪಿಯು ಮುನಿರಾಜುರವರ ವಿರುದ್ಧ ಯಳಂದೂರು ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣವನ್ನು ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಮುನಿರಾಜುರವರು ಬಾಕಿ ಕ್ರಯದ ಹಣವನ್ನು ಪಾವತಿಸಲು ಸಾಧ್ಯವಾಗದ ಕಾರಣ ಸದರಿ ದಿನಾಂಕ 29.08.2022 ರ ಕ್ರಯ ಪತ್ರವನ್ನು ದಿನಾಂಕ 03.04.2023 ರಂದು ರದ್ದುಪಡಿಸಿಕೊಂಡು ತಮ್ಮ ಪಾಲಿನ ಹಣವನ್ನು ವಾಪಸ್ಸು ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕ 29.08.2022 ರ ಕ್ರಯ ಪತ್ರವು ದಿನಾಂಕ 03.04.2023 ರಂದು ರದ್ದುಗೊಂಡ ನಂತರ ಆರೋಪಿಯು ನನಗೆ, ಚಂದ್ರುರವರಿಗೆ ಮತ್ತು ರಾಮೇಗೌಡರವರಿಗೆ ನೀಡಿದ್ದ ಚೆಕ್ ಗಳನ್ನು ವಾಪಸ್ಸು ಕೊಡುವಂತೆ ಕೇಳಿಕೊಂಡರು ಎಂದರೆ ಸರಿಯಲ್ಲ. ನಂತರ ಚಂದ್ರುರವರು ಆರೋಪಿಯಿಂದ ಪಡೆದುಕೊಂಡಿದ್ದ ರೂ.50,000/-ಹಣದ 424360 ಸಂಖ್ಯೆಯ ಚೆಕ್ಕನ್ನು ಆರೋಪಿಗೆ ವಾಪಸ್ಸು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ರಾಮೇಗೌಡರವರು ಜಮೀನಿನ ಮಧ್ಯವರ್ತಿಗಳಾಗಿ ಆರೋಪಿಯಿಂದ ಹರೀಶ್ ಮತ್ತು ಮುನಿರಾಜುರವರಿಗೆ ಜಮೀನು ಮಾರಾಟ ಮಾಡಿಸಿದ ಬಾಬ್ತು ಪಡೆದುಕೊಂಡಿದ್ದ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ಚೆಕ್ ಸಂಖ್ಯೆ 424361 ಆಗಿರುತ್ತದೆ. ಅದೇ ರೀತಿ ರಾಮೇಗೌಡರವರು ಮತ್ತೊಂದು ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ ಸಂಖ್ಯೆ 424362 ಆಗಿರುತ್ತದೆ. ಅದೇ ರೀತಿ ಆರೋಪಿಯು ಚಂದ್ರುರವರಿಗೆ 424360 ಸಂಖ್ಯೆಯ ಚೆಕ್ ಅನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ರ ಭಾವಚಿತ್ರದಲ್ಲಿ ನಾನು ಮತ್ತು ರಾಮೇಗೌಡರವರು ಕುಳಿತಿರುವುದು ಪ್ರಸನ್ನ ಮೂರ್ತಿಯವರ ಮನೆಯಲ್ಲಿ

ಎಂದರೆ ಸರಿ. ನಿಡಿ- 1 ರ ಭಾವಚಿತ್ರದಲ್ಲಿ ನಾನು 2 ಚೆಕ್ ಗಳನ್ನು ಕೈಯಲ್ಲಿ ಹಿಡಿದುಕೊಂಡಿದ್ದೇನೆ. ಸದರಿ 2 ಚೆಕ್ ಗಳು ನನ್ನದು ಒಂದು ಮತ್ತು ರಾಮೇಗೌಡರದ್ದು ಮತ್ತೊಂದು ಎಂದರೆ ಸರಿ. ಆರೋಪಿಯು ನಾನು ಹೇಳಿದಂತೆ ನಮ್ಮ ಮನೆಗೆ ಬಂದು ಹಣವನ್ನು ಪಡೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ನಮ್ಮ ಮನೆಗೆ ಬಂದು ಹಣವನ್ನು ಪಡೆದುಕೊಂಡು ಚೆಕ್ ಅನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಮತ್ತು ರಾಮೇಗೌಡರವರಿಗೆ ನೀಡಿದ್ದ 424361 ಮತ್ತು 424362 ಸಂಖ್ಯೆಯ ಚೆಕ್ ಗಳು ಜಮೀನಿನ ಮಾರಾಟದ ಕಮಿಷನ್ ಬಾಬ್ತು ನೀಡಿದ ಚೆಕ್ ಗಳು ಎಂದರೆ ಸರಿಯಲ್ಲ. ಆರೋಪಿಯು ಆರ್ಥಿಕವಾಗಿ ಚೆನ್ನಾಗಿರುವುದರಿಂದ ನನ್ನ ಬಳಿ ರೂ.25,000/- ಹಣವನ್ನು ಸಾಲವಾಗಿ ಪಡೆದುಕೊಳ್ಳುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಯಾವುದೆ ಹಣವನ್ನು ಸಾಲವಾಗಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಜಮೀನಿನ ಮಾರಾಟದ ಕ್ರಯದ  ಕಮಿಷನ್ ಬಾಬ್ತು ನೀಡಿದ್ದ ಚೆಕ್ ಗಳನ್ನು ನಾವು ವಾಪಸ್ಸು ನೀಡದೆ ಅವುಗಳನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಯಾವುದೇ ಹಣವನ್ನು ಸಾಲವಾಗಿ ಪಡೆದುಕೊಳ್ಳದಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ